# ಅನುಕಂಪದ ನೇಮಕ: ಕುಟುಂಬ ಸದಸ್ಯರಿಗೆ ಅವಕಾಶ ಕಲ್ಪಿಸಿ ಆದೇಶ

ಬೆಂಗಳೂರು: ಸರ್ಕಾರಿ ನೌಕರರು ಮೃತ ಪಟ್ಟ ಸಂದರ್ಭದಲ್ಲಿ ಅವರ ಹತ್ತಿರದ ಸಂಬಂಧಿಕರಿಗೆ ಉದ್ಯೋಗ ಒದಗಿಸಲು ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಅನುಕಂಪದ ಆಧಾರದ ಮೇಲಿನ ಕಾಯ್ದೆಗೆ ತಿದ್ದುಪಡಿ ಮಾಡಿ ಆದೇಶ ಹೊರಡಿಸಿದೆ.

ಈ ಕುರಿತು ರಾಜ್ಯ ಪತ್ರ ಹೊರಡಿಸಿರುವ ರಾಜ್ಯ ಸರ್ಕಾರ, ಸರ್ಕಾರಿ ನೌಕರ ಮೃತ ಪಟ್ಟ ಸಂದರ್ಭದಲ್ಲಿ ಆತನನ್ನು ಅವಲಂಬಿತ ಕುಟುಂಬ ಎಂದರೆ ಆತನ ವಿಧವಾ ಪತ್ನಿ ಮಗ, ಮಗಳು ಅವಿವಾಹಿತ ಅಥವಾ ವಿವಾಹಿತರಾಗಿದ್ದರೂ ಹಾಗೂ ವಿಧವೆ ಮತ್ತು ವಿಚ್ಛೇದಿತೆ ಆಗಿದ್ದರೂ ಅವರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

ಒಂದು ವೇಳೆ, ಮೃತ ಮಹಿಳೆ ಸರ್ಕಾರಿ ನೌಕರರಾಗಿದ್ದರೆ, ಅವಳ ವಿಧುರ ಪತಿ, ಮಗ ಅಥವಾ ಮಗಳು, ಮಗಳು ವಿಧವೆ ಅಥವಾ ವಿಚ್ಛೇದಿತೆ ಆಗಿದ್ದರೂ ಉದ್ಯೋಗ ನೀಡಲು ಅವಕಾಶ ಕಲ್ಪಿಸಲಾಗಿದೆ.

ಮೃತ ಸರ್ಕಾರಿ ಪುರುಷ ಹಾಗೂ ಮಹಿಳಾ ನೌಕರರು ಅವಿವಾಹಿತನಾಗಿದ್ದರೆ ಆತ/ಆಕೆಯೊಂದಿಗೆ ವಾಸವಿರುವ ಆತನ ಸಹೋದರ ಅಥವಾ ಸಹೋದರಿಗೆ ಉದ್ಯೋಗ ನೀಡಲು ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಲ್ಲದೇ ಮೃತ ಸರ್ಕಾರಿ ನೌಕರನ ಪತ್ನಿ ಅಥವಾ ಮಹಿಳಾ ನೌಕರಳ ಪತಿ ನಿಧನರಾಗಿದ್ದರೆ, ಅವರಿಗೆ ಅಪ್ರಾಪ್ತ ಮಕ್ಕಳಿದ್ದರೆ, ಅವರನ್ನು ಪೋಷಿಸುವ ಪಾಲಕರಿಗೆ ಕಾನೂನಿನ ಅಡಿಯಲ್ಲಿ ಉದ್ಯೋಗ ಕಲ್ಪಿಸಲು ಅವಕಾಶ ಕಲ್ಪಿಸಲಾಗಿದೆ.

ಮೃತ ಸರ್ಕಾರಿ ಅವಿವಾಹಿತ ಪುರುಷ ನೌಕರ ಹಾಗೂ ಮಹಿಳಾ ನೌಕರರ ಸಂದರ್ಭದಲ್ಲಿ ಯಾರಿಗೆ ಉದ್ಯೋಗ ನೀಡಬೇಕು ಎನ್ನುವುದನ್ನು ಅವರ ತಂದೆ ತಾಯಿ ಸೂಚಿಸಿದವರಿಗೆ ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ತಂದೆ ತಾಯಿಯ ಆಯ್ಕೆಯಲ್ಲಿ ಭಿನ್ನಾಭಿಪ್ರಾಯ ಇದ್ದರೆ, ತಾಯಿ ಸೂಚಿಸುವವರಿಗೆ ಉದ್ಯೋಗ ಒದಗಿಸಲು ತಿದ್ದುಪಡಿ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ತಂದೆ ತಾಯಿ ಮೊದಲೇ ತೀರಿಕೊಂಡಿದ್ದರೆ, ಮಕ್ಕಳ ವಯಸ್ಸಿಗೆ ಅನುಗುಣವಾಗಿ ಉದ್ಯೋಗ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

ಮೃತ ಸರ್ಕಾರಿ ನೌಕರರು ಸಿ ಮತ್ತು ಡಿ ದರ್ಜೆಗೆ ಸೇರಿದವರಾಗಿದ್ದರೆ, ಅವರ ಪತ್ನಿ ಅಥವಾ ಪತಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲು ವಯಸ್ಸಿನ ಮಿತಿ ಅನ್ವಯಿಸುವಂತಿಲ್ಲ. ಆದರೆ, 55 ವರ್ಷ ಮೀರಿರಬಾರದು. ನೌಕರ ಮೃತ ಪಟ್ಟ ಒಂದು ವರ್ಷದೊಳಗೆ ನೌಕರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಹಾಗೂ ಮೃತ ನೌಕರನ/ಳ ಮಕ್ಕಳು ಅಪ್ರಾಪ್ತರಾಗಿದ್ದರೆ 2 ವರ್ಷದಲ್ಲಿ 18 ವರ್ಷ ಪೂರ್ಣೈಸಿದರೆ ಅವರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. 18 ವರ್ಷ ತುಂಬಿದ ಎರಡು ವರ್ಷದಲ್ಲಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.